# ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಸಾಂಸ್ಕೃತಿಕ ವೇದಿಕೆಯಿಂದ ಹಮ್ಮಿಕೊಂಡಿದ್ದ 'ವಾಲ್ಮೀಕಿ ಜಯಂತಿ' ಕಾರ್ಯಕ್ರಮ

Date:15-10-2016

ಬೇಟೆಗಾರನಾಗಿದ್ದ ವಾಲ್ಮೀಕಿ ಮಹರ್ಷಿಯಾಗಿ ಮಹಾಕಾವ್ಯ ಬರೆದದ್ದು ಮಾನವ ಸಮಾಜದ ದೊಡ್ಡ ಆದರ್ಶ ಎಂದು ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಕನ್ನಡ ಸಹಾಯಕ ಪ್ರಾಧ್ಯಾಪಕ ಡಾ.ಕಂಚಿನಕೆರೆ ಗೋವಿಂದೇಗೌಡ ತಿಳಿಸಿದರು.

ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಸಾಂಸ್ಕೃತಿಕ ವೇದಿಕೆಯಿಂದ ಹಮ್ಮಿಕೊಂಡಿದ್ದ 'ವಾಲ್ಮೀಕಿ ಜಯಂತಿ' ಕಾರ್ಯಕ್ರಮದಲ್ಲಿ ಪ್ರಧಾನ ಭಾಷಣಕಾರರಾಗಿ ಮಾತನಾಡಿ, ವಾಲ್ಮೀಕಿ ಒಬ್ಬ ಮಹಾ ಮಾನವತಾವಾದಿ ಎಂದು ಪ್ರತಿಪಾದಿಸಿದರು.

ಅನಕ್ಷರಸ್ಥನಾಗಿ ಕಳ್ಳತನ, ಸುಲಿಗೆಯಲ್ಲಿ ತೊಡಗಿದ್ದ ರತ್ನಾಕರನಿಗೆ ನಾರದ ಮುನಿಗಳ ಮಾತು ಕಣ್ತೆರೆಸಿತು. 'ರಾಮ' ನಾಮ ಜಪದ ಮೂಲಕ ರತ್ನಾಕರ 'ವಾಲ್ಮೀಕಿ'ಯಾಗಿದ್ದು ಸ್ವಾರಸ್ಯಕರ ಸಂಗತಿ. ಪ್ರಣಯ ಕೇಳಿಯಲ್ಲಿ ತೊಡಗಿದ್ದ ಕ್ರೌಂಚ ಪಕ್ಷಿಗಳು ವಾಲ್ಮೀಕಿಯ ಕಣ್ಣಿಗೆ ಬಿದ್ದದ್ದು, ಗಂಡು ಪಕ್ಷಿಯನ್ನು ಬೇಡ ಕೊಂದದ್ದು, ಹೆಣ್ಣು ಪಕ್ಷಿಯ ರೋಧನ. ಶೋಕದಿಂದ ಹೊರಹೊಮ್ಮಿದ 'ಮಾ ನಿಷಾದ'(ಎಲೈ ಬೇಡನೇ) ಎಂಬ ಉದ್ಘಾರದ ಮಾತು. ಶೋಕವೇ ಶ್ಲೋಕವಾಗಿ ಪರಿಣಮಿಸಿ ರಾಮಾಯಣ ಮಹಾಕಾವ್ಯದ ಸೃಷ್ಟಿಗೆ ಕಾರಣವಾದ್ದು ವಾಲ್ಮೀಕಿಗಿದ್ದ ಸಂಸ್ಕಾರಕ್ಕೆ ಸಾಕ್ಷಿ ಎಂದರು.



ವಾಲ್ಮೀಕಿ ರಾಮಾಯಣ ಆರು ಕಾಂಡಗಳ 24 ಸಾವಿರ ಶ್ಲೋಕಗಳ ಮಹಾಕಾವ್ಯ. ಮುಂದಿನ ಉತ್ತರ ಕಾಂಡ ವಾಲ್ಮೀಕಿ ಬರೆದದ್ದಲ್ಲ ಎಂಬ ಅಭಿಪ್ರಾಯವಿದೆ. ಆದರೆ ಇದೇ ಭಾಗ ರಾಮಾಯಣದ ಮಹತ್ವದ ಘಟ್ಟ. ಇಲ್ಲಿ ರಾಮ ಸೀತೆಯನ್ನು ತ್ಯಜಿಸಿದ್ದುದು, ಲವ-ಕುಶರ ಜನನ, ರಾಮನ ಅಶ್ವಮೇಧ ಯಾಗದ ವೃತ್ತಾಂತಗಳಿವೆ. ಸೀತೆಯದು ಕರುಣಾಜನಕ ಕತೆ. ಸೀತೆ ರಾಜನನ್ನು ಮದುವೆಯಾದರೂ ಅರಣ್ಯವಾಸವೇ ಗತಿಯಾಯಿತು. ಅಗ್ನಿ ಪ್ರವೇಶ, ಲೋಕಾಪವಾದಕ್ಕೆ ಹೆದರಿ ರಾಮ ಸೀತೆಯನ್ನು ಪರಿತ್ಯಾಗ ಮಾಡಿದ್ದು ಜಿಜ್ಞಾಸೆಯ ಸಂಗತಿಗಳು ಎಂದು ವಿವರಿಸಿದರು.

ಕಾಡುಪಾಲಾಗಿದ್ದ ಸೀತೆಗೆ ವಾಲ್ಮೀಕಿ ತನ್ನ ಆಶ್ರಯ ನೀಡುತ್ತಾರೆ. ಲವ-ಕುಶರಿಗೆ ಶಾಸ್ತ್ರ ಮತ್ತು ಶಸ್ತ್ರ ವಿದ್ಯೆಗಳನ್ನು ಹೇಳಿಕೊಡುತ್ತಾರೆ. ಅಷ್ಟೇ ಅಲ್ಲ, ರಾಮಾಯಣವನ್ನು ಅರ್ಥಪೂರ್ಣವಾಗಿ

ಹಾಡುವುದನ್ನು ಕಲಿಸುತ್ತಾರೆ. ಈ ಮೂಲಕ ವಾಲ್ಮೀಕಿ ಕೇವಲ ಕವಿಯಲ್ಲ, ಶಿಕ್ಷಣ ಪ್ರೇಮಿ, ಮಾನವೀತೆಯ ದೊಡ್ಡ ಆದರ್ಶ ಮೂರ್ತಿ ಎನಿಸಿದ್ದಾರೆ ಎಂದು ವಿಶ್ಲೇಷಿಸಿದರು.

ರಾಮಾಯಣದ ಸಹೋದರತ್ವ, ಏಕಪತ್ನಿ ವ್ರತ, ಪಾತಿವ್ರಾತ್ಯ, ಪರಸ್ತ್ರೀ ಮೋಹ, ದುರಾಸೆಯ ಫಲಗಳು ಸಾರ್ವಕಾಲಿಕ ಮೌಲ್ಯಗಳಾಗಿವೆ. ರಾಮನ ಸಕಾಲೀನರಾದ ವಾಲ್ಮೀಕಿ ಮಾನವನ ಬದುಕು ಮತ್ತು ದೌರ್ಬಲ್ಯಗಳನ್ನು ಚಿತ್ರಿಸಿದ್ದಾರೆ. ಕಾವ್ಯದ ನಾಯಕನ ಗುಣಗಳಿಗಿಂತಲೂ ವಾಲ್ಮೀಕಿಯ ಆದರ್ಶ ಮತ್ತು ಮಾನವತೆಯೇ ಮಿಗಿಲಾಗಿರುವುದು ಮತ್ತೊಂದು ವಿಶೇಷ ಎಂದರು.

ಕಾಲೇಜಿನ ಪ್ರಾಂಶುಪಾಲ ಡಾ.ಅಣ್ಣೇಗೌಡ ಅಧ್ಯಕ್ಷತೆವಹಿಸಿ ಮಾತನಾಡಿದರು. ವಿವಿಧ ಸಮಿತಿಗಳ ಪ್ರಧಾನ ಸಂಯೋಜಕ ಪ್ರೊ.ಎಂ.ಶಿವಣ್ಣ, ಅಧ್ಯಾಪಕ ಕಾರ್ಯದರ್ಶಿ ಪ್ರೊ.ಸೋಮಣ್ಣ, ಸಾಂಸ್ಕೃತಿಕ ವೇದಿಕೆ ಕಾರ್ಯದರ್ಶಿ ಪ್ರೊ.ಪಿ.ಶಿವಣ್ಣ, ವಿದ್ಯಾರ್ಥಿ ಸಂಘದ ಅಧ್ಯಕ್ಷೆ ಕು.ಕೆ.ಸೌಮ್ಯ, ಕಾರ್ಯದರ್ಶಿ ಕು.ಸಿ.ಡಿ.ಮೇಘನ ಹಾಜರಿದ್ದರು. ಇದಕ್ಕೂ ಮುನ್ನ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು.